ಯುವಕ ಶಾಲೆಗೆ ಹೋಗುವಂತಹ ಸಂದರ್ಭದಲ್ಲಿ ಹುಚ್ಚುನಾಯಿ ಕಚ್ಚಿ, ಅವನು ಮೂರು ದಿವಸ ಆಸ್ಪತ್ರೆಗೆ ಹೋದರೂ ಚುಚ್ಚು ಮದ್ದು ಇಲ್ಲವೆಂದು ವಾಪಸ್ಸು ಬಂದು, ನಾಲ್ಕನೆ ದಿವಸ ಕೊಟ್ಟಿದ್ದಾರೆ. ಆದರೆ ಇಪ್ಪತ್ತನೆ ದಿವಸದಲ್ಲಿ ಅವನು ಹುಚ್ಚು ಹಿಡಿದು ಸತ್ತು ಹೋಗಿದ್ದಾನೆ. ಆದರೂ ಕೂಡ ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದರೆ ಇವರು ಯಾವ ರೀತಿ ಸರ್ಕಾರ ನಡೆಸುತ್ತಿದ್ದಾರೆ? ಅಧಿಕಾರಿಗಳು ಯಾವ ರೀತಿ ಕೆಲಸ ಮಾಡುತ್ತಿದ್ದಾರೆ ಎಂದು ತಿಳಿದುಕೊಳ್ಳಬೇಕು. ಅದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀಮತಿ ನಫೀಜಾ ಫಜಲ್: ಮಾನ್ಯ ಅಧ್ಯಕ್ಷರೆ, ಅವರು ಹೇಳಿದ ವಿಚಾರ ನಮ್ಮ ಗಮನಕ್ಕೆ ಬಂದಿಲ್ಲ. ಈಗ ಮಾನ್ಯ ಸದಸ್ಯರು ಹೇಳಿದ್ದಾರೆ, ಅವರು ಹೇಳಿದ ಮೇಲೆ ನಾವು ಅಧಿಕಾರಿಗಳಿಗೆ ಹೇಳಿ ಮಾಹಿತಿಯನ್ನು ತೆಗೆದುಕೊಂಡು ಅದರ ಬಗ್ಗೆ ಕ್ರಮ ತೆಗೆದುಕೊಂಡು ತಮಗೆ ವರದಿಯನ್ನು ಕೊಡುತ್ತೇನೆ.

ಅಧ್ಯಕ್ಷರು: ಮಾಹಿತಿಯನ್ನು ತರಿಸಿಕೊಂಡು ನಂತರ ನಿಮಗೆ ಹೇಳುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್: ಮಾನ್ಯ ಅಧ್ಯಕ್ಷರೆ, ನಾನು ಸರ್ಕಾರದ ಗಮನಕ್ಕೂ ಹಾಗೂ ಮಂತ್ರಿಗಳ ಗಮನಕ್ಕೂ ಸಹ ತಂದಿದ್ದೇನೆ. ನಾನು ಮಾಹಿತಿ ಕೊಟ್ಟಿದ್ದೇನೆ. ಅದರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತಾರೆ?

ಶ್ರೀ ಹೆಚ್. ಬಸವರಾಜ್: ಮಾನ್ಯ ಅಧ್ಯಕ್ಷರೆ, ಆಸ್ಪತ್ರೆಯಲ್ಲಿ ಔಷಧ ಇಲ್ಲವೆಂದರೆ ಅದು ಸರ್ಕಾರದ ಲೋಪದಿಂದ ಆಗಿರುವುದರಿಂದ ಅವರಿಗೆ ಪರಿಹಾರವನ್ನು ಕೊಡಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಮುಂಡರಗಿ ತಾಲ್ಲೂಕಿನಲ್ಲಿ ಅಂಜುಮಾನ್ ಸಂಸ್ಥೆಯಿಂದ ನಡೆಯುವ ಶಾಲೆಗಳು.

23(177)

ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ(ಮುಂಡರಗಿ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನಲ್ಲಿ ಅಂಜುಮಾನ್ ಸಂಸ್ಥೆಯಿಂದ ಉರ್ದು ಪ್ರೌಢಶಾಲೆ ಮತ್ತು ಪದವಿ ಪೂರ್ವ ಮಹಾ ವಿದ್ಯಾಲಯ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಸದರಿ ಶಾಲೆಗಳಲ್ಲಿ ಮಕ್ಕಳಿಲ್ಲದೆ, ಶಿಕ್ಷಕರಿಲ್ಲದೆ ಹಾಗೆಯೇ ಪೀಠೋಪಕರಣ, ಕಟ್ಟಡ ಯಾವುದೇ ಸವಲತ್ತುಗಳಿಲ್ಲದಿದ್ದರೂ ಸರ್ಕಾರ ಅವುಗಳ ಮಾನ್ಯತೆಯನ್ನು ಏಕೆ ರದ್ದು ಮಾಡಿರುವುದಿಲ್ಲ.

ಹೆಚ್.ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):

ಅ. ಉರ್ದು ಪ್ರೌಢಶಾಲೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಪದವಿ ಪೂರ್ವ ಕಾಲೇಜು ನಡೆಯುತ್ತಿಲ್ಲ.

ಆ. ಸದರಿ ಉರ್ದು ಪ್ರೌಢಶಾಲೆಯ ಮಂಜೂರಾತಿ ರದ್ದುಪಡಿಸುವುದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಪಾಟೀಲ್ ಸಿದ್ಧಲಿಂಗನಗೌಡ ಸಿದ್ದನಗೌಡ: ಮಾನ್ಯ ಅಧ್ಯಕ್ಷರೆ, ನನ್ನ ಆ ಪ್ರಶ್ನೆಗೆ ಉತ್ತರದಲ್ಲಿ ಗಮನಕ್ಕೆ ಬಂದಿದೆ ಎಂದು ತಿಳಿಸಿದ್ದಾರೆ, ಪದವಿ ಪೂರ್ವ ಮಹಾ ವಿದ್ಯಾಲಯ ನಡೆಯುತ್ತಿರುವುದು ಗಮನಕ್ಕೆ ಬಂದಿಲ್ಲವೆಂದು ಹೇಳಿದ್ದಾರೆ. ಆದರೆ ಇಲ್ಲಿ ಪದವಿ ಪೂರ್ವ ಮಹಾ ವಿದ್ಯಾಲಯ ನಡೆಯುತ್ತಿದೆ. ಇದಕ್ಕೆ ತಾವು ಪರವಾನಗಿಯನ್ನು ಕೊಟ್ಟಿದ್ದಿರೋ ಅಥವ ಇಲ್ಲವೋ? ಎಂಬುದನ್ನು ಮಾನ್ಯ ಮಂತ್ರಿಯವರು ಹೇಳಬೇಕು. ಅವರ ಅರ್ಜಿಯಲ್ಲಿ ನಮ್ಮ ಸರ್ಕಾರಿ ಪ್ರೌಢಶಾಲೆಯನ್ನು ಲಕ್ಷ್ಮೇಶ್ವರಕ್ಕೆ ಹಾಕಿದ್ದೀರಿ. ನಾನು ಇದರ ಬಗ್ಗೆ ಮತ್ತೊಂದು ಪ್ರಶ್ನೆಯನ್ನು ಹಾಕಿದ್ದೆ, ಅದು ಲಿಖಿತ ಮೂಲಕ ಪ್ರಶ್ನೆಯ ಉತ್ತರವಾಗಿದೆ. ನಾವು ಯಾವ ಪ್ರಶ್ನೆಯನ್ನು ಇಲ್ಲಿ ಕೇಳಬೇಕೆಂದು ಇರುತ್ತೇವೆಯೋ ಅದು ನಿಮ್ಮ ಕಚೇರಿಯಲ್ಲಿ ಹೇಗೋ ತಿರುಚಿಕೊಂಡು ಬದಲಿಯಾಗಿ ಹೋಗುತ್ತವೆ. ಈಗ ನಾನು ಮತ್ತೆ ಎರಡನೇ ಬಾರಿ ಈ ಪ್ರಶ್ನೆಯನ್ನು ಕೇಳುತ್ತಿರುವುದು. ಈ ರೀತಿಯಾಗಿ ಪ್ರಶ್ನೆಯನ್ನು ತಿರುಚಿ ಬಿಟ್ಟರೆ ನಾವು ಹೇಗೆ ಸಭೆಯಲ್ಲಿ ಉತ್ತರವನ್ನು ಕೇಳುವುದು? ಈಗ ನಾನು ಇಲ್ಲಿ ಕೇಳುವಂಥಾದ್ದು ಮುಂಡರಗಿ ತಾಲ್ಲೂಕಿನ ಸಿಂಗಟಾಲೂರಿನ ಸರ್ಕಾರಿ ಜ್ಯೂನಿಯರ್ ಕಾಲೇಜ್ ಸ್ಥಳಾಂತರ ಮಾಡಿದ್ದನ್ನು ರದ್ದು ಮಾಡಿ ಹಿರೇವಡ್ಡಟ್ಟಿಗೆ ಬದಲಾವಣೆ ಮಾಡಿ ಆದೇಶ ಮಾಡಿರುವಂಥಾದ್ದು ನಿಜವೇ? ಹಾಗೆ ಗದಗ್ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಹಿರೇವಡ್ಡಟ್ಟಿ ಗ್ರಾಮದಲ್ಲಿ ಸದರಿ ಜ್ಯೂನಿಯರ್ ಕಾಲೇಜನ್ನು ಸ್ಥಳಾಂತರಿಸಿ ತಾವು ಉದ್ಘಾಟನೆಗಾಗಿ ಒಪ್ಪಿದ್ದು, ಪ್ರವಾಸ ಕಾರ್ಯಕ್ರಮದಲ್ಲಿ ಅದನ್ನು ಸೇರಿಸಿದ್ದು ನಿಜವೇ? ಇದನ್ನು ನಿಮ್ಮ ಕಛೇರಿಯವರು ಸೇರಿಸಿಲ್ಲ. ನನಗೆ ಇಲ್ಲಿ ಏನು ಉತ್ತರ ಬೇಕಾಗಿತ್ತೋ ಅದನ್ನೇ ತೆಗೆದುಬಿಟ್ಟಿದ್ದಾರೆ. ಈ ರೀತಿಯಾದರೆ ನಾನು ಏನು ಮಾಡಬೇಕು? ಇವರು ಪ್ರವಾಸ ಕಾರ್ಯಕ್ರಮದಲ್ಲಿ ಹಾಕಿ, ನಾನು ಉದ್ಘಾಟನಾ ಸಮಾರಂಭಕ್ಕೆ ಬರುತ್ತೇನೆಂದು ಹೇಳಿ, ಇದಕ್ಕೂ ಏರ್ಪಾಡುಗಳು ಮಾಡಿ, ನಂತರ ಇವರು ಬರುವುದಕ್ಕಾಗುವುದಿಲ್ಲವೆಂದು ತಿಳಿಸಿದರು. ಇದರಿಂದ ಈ

ಕಾರ್ಯಕ್ರಮವೂ ಮುಂದಕ್ಕೆ ಹೋಯಿತು, ನಂತರ ಈ ಕಾಲೇಜ್ ಬೇರೆ ಕಡೆಗೆ ಹೋಯಿತು. ನಾನು ಇದನ್ನೇ ಕೇಳಬೇಕೆಂದು ಇದ್ದೆ, ಇದನ್ನು ನಿಮ್ಮ ಕಚೇರಿಯವರು ಬಿಟ್ಟಿದ್ದಾರೆ.

ಅಧ್ಯಕ್ಷರು: ಈ ವಿಷಯವನ್ನು ಇಲ್ಲಿ ಚರ್ಚೆ ಮಾಡುವುದು ಬೇಡ, ತಾವು ನನ್ನ ಕಚೇರಿಗೆ ಬನ್ನಿ ಮಾತನಾಡೋಣ. The person, who has redrafted the question, I will take action against him.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಈಗ ನಾನು ಇದನ್ನೇ ಉಪ ಪ್ರಶ್ನೆಯನ್ನಾಗಿ ಕೇಳುತ್ತೇನೆ, ಅವರು ಇದಕ್ಕೆ ಉತ್ತರವನ್ನು ಕೊಡಲಿ. ಇವರು ನನ್ನ ಪತ್ರದಲ್ಲೇ ಬರೆದು, ಇದನ್ನು ಲೇಟೆಸ್ಟ್‌ಗೆ ಸ್ಥಳಾಂತರಿಸಬಹುದೆಂದು ಬರೆದು, ನಂತರ ಕಾರ್ಯಕ್ರಮಗಳನ್ನು ಹಾಕಿ, ನಾವು ಇದಕ್ಕೆ ಆಮಂತ್ರಣ ಪತ್ರವನ್ನು ಮಾಡಿಸಿ, ಅಲ್ಲಿ ಉದ್ಘಾಟನಾ ಸಮಾರಂಭವನ್ನು ಇಟ್ಟುಕೊಂಡೆವು. ಇವರು ಏನು ಕೆಲಸವೆಂದು ಹೇಳಿ ನಂತರ ಈ ಕಾಲೇಜನ್ನು ಲಕ್ಷ್ಮೇಶ್ವರಕ್ಕೆ ಹಾಕಿದರು. ಈಗ ಇವರು ಕಾಲೇಜು ನಡೆಯುವುದಿಲ್ಲವೆಂದು ಹೇಳಿದರು. ಇನ್ನು ಎರಡನೆಯ ಪ್ರಶ್ನೆಗೆ ಉರ್ದು ಪ್ರೌಢಶಾಲೆಯ ಮಂಜೂರಾತಿ ರದ್ದುಪಡಿಸುವುದು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಸರ್ಕಾರ ಉತ್ತರ ಕೊಟ್ಟಿದೆ. ನಾನು ಇಲ್ಲಿ ಉರ್ದು ಶಾಲೆಗೆ ಮಕ್ಕಳಿಲ್ಲದೆ, ಶಿಕ್ಷಕರಿಲ್ಲದೆ, ಪೀಠೋಪಕರಣ, ಯಾವುದೇ ಸವಲತ್ತುಗಳು ಇಲ್ಲದೆ ಇದ್ದಾರೆ. ಇಲ್ಲಿ ಅವರಿಗೆ ಒಂದು, ನಮಗೆ ಒಂದು ರೀತಿಯ ಅಲಿಗೇಷನ್ ಕೊಡುತ್ತಾರೆ. ಇಲ್ಲಿ ಸರ್ಕಾರಿ ಉರ್ದು ಶಾಲೆ ಇದೆಯೆಂದು ಅಲ್ಲಿಗೆ ಹುಡುಗರನ್ನು ಸ್ಥಳಾಂತರ ಮಾಡಿದ್ದಾರೆಂದು ಹೇಳುತ್ತಾರೆ, ಇವರು ಅವರ ಅರ್ಜಿಯಲ್ಲಿ ದಾವಣಗೆರೆಗೆ ಸ್ಥಳಾಂತರ ಮಾಡಿದ್ದಾರೆಂದು ಬರೆದಿದ್ದಾರೆ. ಈ ರೀತಿಯಾಗಿ ಅವರು ಅರ್ಜಿಯನ್ನು ಕೊಟ್ಟರೆ ಯಾವುದೇ ಎನ್‌ಕ್ವೈರಿಯೂ ಇರುವುದಿಲ್ಲ. ಅನಂತರ ನಾನು ಬಂದು ತಿಳಿಸಿದ ಮೇಲೆ ತಾವು ಅದನ್ನು ನಿಲ್ಲಿಸಿದ್ದೀರಿ. ಈ ರೀತಿ ನಡೆಸುವುದಕ್ಕಾಗದೇ ಇರುವಂತಹ ಶಾಲೆಗಳನ್ನು ತಾವು ನಡೆಸುತ್ತಿದ್ದೀರಿ. ಈ ರೀತಿಯಾದ ಮೇಲೆ ''ಪರಿಶೀಲನೆಯಲ್ಲಿದೆ'' ಎಂಬ ಉತ್ತರವನ್ನು ಕೊಟ್ಟಿದ್ದೀರಿ, ಇದನ್ನು ಏಕೆ ಪರಿಶೀಲನೆಯಲ್ಲಿಟ್ಟಿದ್ದೀರಿ? ಇದನ್ನು ತಾವು ಏಕೆ ರದ್ದು ಮಾಡಲಿಲ್ಲ? ಯಾವಾಗ ರದ್ದು ಮಾಡುತ್ತೀರೆಂಬುದನ್ನು ಹೇಳಬೇಕು.

ಶ್ರೀ ಹೆಚ್.ವಿಶ್ವನಾಥ್: ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದಂತಹ ಎಸ್.ಎಸ್.ಪಾಟೀಲ್‌ರವರು ಕೇಳಿದಂತಹ ಪ್ರಶ್ನೆಗೆ ಅಲ್ಲಿ ಖಾಸಗಿ ಸಂಸ್ಥೆಯಿಂದ ಒಂದು ಶಾಲೆ ನಡೆಯುತ್ತಿದೆ. ಅದೇ ರೀತಿಯಲ್ಲಿ ಸರ್ಕಾರದಿಂದಲೂ ಕೂಡ ಒಂದು ಶಾಲೆ ನಡೆಯುತ್ತಿದೆ, ಮತ್ತೆ ಅಲ್ಲಿ ಗೊಂದಲದ ವಾತಾವರಣವೂ ನಿರ್ಮಾಣವಾಗಿದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದನ್ನು ಸರಿ ಮಾಡಬೇಕಾಗಿತ್ತು, ಇದನ್ನು ಸರಿ

ಮಾಡಿ ಮುಂದಿನ ಶೈಕ್ಷಣಿಕ ವರ್ಷದಿಂದಲೇ ಸಮಾಧಾನಕರವಾದ ರೀತಿಯಲ್ಲಿ ಮಾಡಬೇಕಾಗಿತ್ತು. ಆದರೆ ಇಲ್ಲಿ ನಮಗೆ ಬಂದಿರುವಂತಹ ಮಾಹಿತಿಗಳ ಪ್ರಕಾರ ಮಕ್ಕಳ ಸಂಖ್ಯೆ ಸರ್ಕಾರಿ ಶಾಲೆಯಲ್ಲಿ ಮತ್ತೆ ಖಾಸಗಿ ಶಾಲೆಯಲ್ಲಿ ಒಂದೊಂದು ಸಾರಿ ಒಂದೊಂದು ಸಂಖ್ಯೆಯಲ್ಲಿ ಬರುತ್ತಿದೆ. ನಾವು ಮಕ್ಕಳೇ ಇಲ್ಲದಿರುವಂತಹ ಕೆಲವು ಶಾಲೆಗಳನ್ನು ಮುಚ್ಚಿದ್ದೇವೆ, ಕೆಲವನ್ನು ಸ್ಥಳಾಂತರ ಕೂಡ ಮಾಡಿದ್ದೇವೆ. ಮಾನ್ಯ ಪಾಟೀಲ್‌ರವರು ಕೇಳಿರುವಂತಹ ವಿಷಯದಲ್ಲಿ ವಸ್ತು ಸ್ಥಿತಿ ಇದೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದರ ಬಗ್ಗೆ ನಾನು ಅವರ ಹತ್ತಿರ ಚರ್ಚೆ ಮಾಡುತ್ತೇನೆ, ಏಕೆಂದರೆ ಇದು ಡೆಮಾಕ್ರಟಿಕ್ ಇನ್‌ಸ್ಟಿಟ್ಯೂಷನ್‌ಗಳಾಗಿರುವುದರಿಂದ ಸ್ಥಳೀಯ ಜನರ ಜೊತೆಗೆ ಕೂಡ ಚರ್ಚೆ ಮಾಡಿ ಯಾವುದನ್ನು ಇಟ್ಟುಕೊಳ್ಳಬೇಕು, ಯಾವುದನ್ನು ಸ್ಥಳಾಂತರ ಮಾಡಬೇಕೆಂಬುದನ್ನು ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಇಲ್ಲಿ ಉರ್ದು ಶಾಲೆಯಲ್ಲಿ ಮಕ್ಕಳೇ ಇಲ್ಲ, ಇದನ್ನು ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಇದು ಎಷ್ಟು ವರ್ಷಗಳಿಂದ ಪರಿಶೀಲನೆಯಲ್ಲಿದೆ? ಇದನ್ನು ಪ್ರಾರಂಭ ಮಾಡಿ ಎಷ್ಟು ವರ್ಷಗಳಾಯಿತು? ಅಲ್ಲಿಂದ ಇಲ್ಲಿಯವರೆಗೂ ಇನ್‌ಸ್ಪೆಕ್ಷನ್ ಮಾಡಿದ್ದೀರೊ, ಇಲ್ಲವೋ? ಅಲ್ಲಿ ಹುಡುಗರು ಇದ್ದಾರೋ, ಇಲ್ಲವೋ ಟೀಚರ್ಸ್ ಇದ್ದಾರೋ, ಇಲ್ಲವೋ, ಎಂಬುದನ್ನು ಮಾನ್ಯ ಮಂತ್ರಿಯವರು ಹೇಳಬೇಕು.

ಶ್ರೀ ಹೆಚ್.ವಿಶ್ವನಾಥ್: ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಈಗಾಗಲೇ ಇಂತಹ 224 ಶಾಲೆಗಳನ್ನು ಮುಚ್ಚಿದ್ದೇವೆ, ಇಲ್ಲಿ ಮಕ್ಕಳೇ ಇಲ್ಲ, ಹೆಸರಿಗೆ ಶಾಲೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಇವರು ನಮಗೆ ಯಾವಾಗಲಾದರೂ ಗ್ರಾಂಟ್ ಸಿಗಲಿ ಎಂದು ಬೋರ್ಡ್‌ಗಳನ್ನು ಹಾಕಿಕೊಂಡು ನಡೆಸುತ್ತಿದ್ದಾರೆ. ಆದುದರಿಂದ ನಾವು ಇದನ್ನು ತೀವ್ರವಾಗಿ ತೆಗೆದುಕೊಂಡು ತಮ್ಮೊಂದಿಗೆ ಚರ್ಚೆ ಮಾಡಿ ಸಮಾಧಾನಕರವಾದ ಉತ್ತರ ಕೊಡುತ್ತೇನೆ.

ಬಾಗೇಪಲ್ಲಿ ತಾಲ್ಲೂಕಿನ ಆಸ್ಪತ್ರೆಗಳಲ್ಲಿ ವೈದ್ಯರ ಮತ್ತು ಔಷಧಿಗಳ ಕೊರತೆ.

24(484)

ಶ್ರೀ ಸಂಪಂಗಿ.ಎನ್.(ಬಾಗೇಪಲ್ಲಿ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಇರುವುದು,